<u>2 ನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ, ತುಮಕೂರು</u>

<u>ಸಿ ಸಿ ನಂ. **250/2024**</u>

ಸಿಡಬ್ಲ್ಯೂ: 2

ಪಿಡಬ್ಲ್ಯೂ: 2

(ಸಾಕ್ಷಿಯನ್ನು ದಿಃ 13.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

| | |
|---|---|
| ಹೆಸರು | ಪಾಲಾಕ್ಷಯ್ಯ |
| ತಂದೆಯ/ಗಂಡನ ಹೆಸರು | ರುದ್ರಮುನಿಯಪ್ಪ |
| ವಯಸ್ಸು | 59 ವರ್ಷ |
| ಉದ್ಯೋಗ | ಖಾಸಗಿ ಕೆಲಸ |
| ವಾಸ | ಹೆಗ್ಗೆರೆ , ತುಮಕೂರು |

<u>ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-</u>

ಆರೋಪಿಗಳು ನನಗೆ ಗೊತ್ತು. ಚಾಸಾ-1 ನನ್ನ ಮಗಳು , ಚಾಸಾ-3 ನನ್ನ ಅಣ್ಣ , ಚಾಸಾ-4 ನನ್ನ ಮಗ. ಚಾಸಾ-5 ಮತ್ತು 6 ನನಗೆ ಪರಿಚಯಸ್ಥರು. ಆರೋಪಿಗಳು ನನ್ನ ಮಗಳಿಗೆ ಯಾವುದೆ ರೀತಿ ದೈಹಿಕವಾಗಿ ಹಾಗೂ ಮಾನಸಿಕವಾಗಿ ಹಿಂಸೆ ನೀಡಿಲ್ಲ , ವರದಕ್ಷಿಣೆ ಕಿರುಕುಳ ನೀಡಿಲ್ಲ , ಅವಾಚ್ಯ ಶಬ್ದಗಳಿಂದ ನನನ್ನು ಬೈದಿಲ್ಲ , ಹೊಡೆದಿಲ್ಲ , ಪ್ರಾಣ ಬೆದರಿಕೆ ಹಾಕಿಲ್ಲ. ನಾನು ಪೊಲೀಸರ ಮುಂದೆ ಯಾವುದೆ ಹೇಳಿಕೆ ನೀಡಿಲ್ಲ.

(ಈ ಹಂತದಲ್ಲಿ ಮಾನ್ಯ ಸ.ಸ.ಅ.ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಮುಖ್ಯ ವಿಚಾರಣೆಯಲ್ಲಿ ಅಬಿಯೋಜನೆಯ ಪ್ರಕರಣಕ್ಕೆ ವ್ಯತಿರಿಕ್ತವಾಗಿ ಸಾಕ್ಷ್ಯನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ , ಸಹಾಯಕ ಅಬಿಯೋಜಕರಿಗೆ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು)

<u>ಪಾಟೀ ಸವಾಲುಃ ಮಾನ್ಯ ಸ.ಸ.ಅ. ರವರಿಂದಃ-</u>

2. ದಿನಾಂಕ 06.05.2022 ರಂದು ನನ್ನ ಮಗಳ ಚಾಸಾ-1 ರವರ ಮದುವೆ 1 ನೇ ಆರೋಪಿಯ ಜೊತೆ ನಾನು ಖರ್ಚು ಮಾಡಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ 6 ಲಕ್ಷ ಹಣ , 50 ಗ್ರಾಂ ತೂಕದ ಕೈ ಕಡಗ , 12 ಗ್ರಾಂ ಉಂಗುರ , ಒಂದು ಕೆಜಿ ಬಿಳ್ಳಿ ಮತ್ತು ಚೊಂಬನ್ನು 1 ನೇ ಆರೋಪಿಗೆ ಕೊಟ್ಟು , ನನ್ನ ಮಗಳಿಗೆ 10 ಗ್ರಾಂ ಓಲೆ ಜುಮುಕಿ , 30 ಗ್ರಾಂ ಚಿನ್ನದ ಬಳೆಗಳನ್ನು ಕೊಟ್ಟು ಮದುವೆ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಒಂದು ತಿಂಗಳ ಕಾಲ ಚೆನ್ನಾಗಿದ್ದು ನಂತರ ಪಿಜಿ ಮಾಡಬೇಕೆಂದು ಆರೋಪಿಗಳಿಗೆ 5 ಲಕ್ಷ ಹಣ ನೀಡಿದ್ದೇನೆ ಎಂದರೆ ಸರಿಯಲ್ಲ. ಅದೇ ರೀತಿ 6 ಲಕ್ಷ ವರದಕ್ಷಿಣೆ ಹಣ ನೀಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗಳು ಗರ್ಬಿಣಿಯಾಗಿದ್ದಾಗ 50 ಲಕ್ಷ ಹಣ ವರದಕ್ಷಿಣೆಯಾಗಿ ತರಬೇಕು ಇಲ್ಲದಿದ್ದರೆ ಗರ್ಭಪಾತ ಮಾಡಿಸುತ್ತೇವೆಂದು ಆರೋಪಿಗಳು ಹೇಳಿದ್ದಾರೆ ಎಂದರೆ ಸರಿಯಲ್ಲ.

3. ನನ್ನ ಮಗಳಿಗೆ ಆರೋಪಿಗಳು ಅವಾಚ್ಯಶಬ್ದಗಳಿಂದ ಬೈದಿದ್ದಾರೆ ಎಂದರೆ ಸರಿಯಲ್ಲ. ಲೀಲಾವತಿಯವರು ನನ್ನ ಮಗಳಿಗೆ ಅನ್ನದಲ್ಲಿ ಕೆಮಿಕಲ್ ಹಾಕಿಕೊಟ್ಟು ನನ್ನ ಮಗಳು ಅಸ್ವಸ್ಥಳಾಗಿ ಆಸ್ಪತ್ರೆಗೆ ಸೇರಿದ್ದಳು ಎಂದರೆ ಸರಿಯಲ್ಲ. ಬಾಣಂತಿತನಕ್ಕೆ ನನ್ನ ಮನೆಗೆ ಬಂದಾಗ ಅಲ್ಲಿಯು ಸಹ ಹಣ ತೆಗೆದುಕೊಂಡು ಬಾ ಎಂದು ಆರೋಪಿಗಳು ಹಿಂಸೆ ನೀಡಿದ್ದಾರೆ ಎಂದರೆ ಸರಿಯಲ್ಲ. ತರದಿದ್ದರೆ ಸಾಯಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗಳು ಮತ್ತು ಮೊಮ್ಮಗಳನ್ನು ಅವರ ಮನೆಗೆ ಬಿಡಲು ಹೋದಾಗ ಅವರು 20 ಲಕ್ಷ ಹಣ ಕೇಳಿದ್ದೇವೆ ಆ ಹಣವನ್ನು ಕೊಟ್ಟು ಬಿಟ್ಟು ಹೋಗಿ ಎಂದು ಇಲ್ಲವಾದರೆ ಕರೆದುಕೊಂಡು ಹೋಗಿ ಎಂದು ಹೇಳಿದ್ದಾರೆ ಎಂದರೆ ಸರಿಯಲ್ಲ. ನನ್ನ ಮಗಳಿಗೆ ಅವಾಚ್ಯ ಶಬ್ದಗಳಿಂದ ಬೈದು ಸಾಯಿಸುತ್ತೇವೆಂದು ಪ್ರಾಣ ಬೆದರಿಕೆ ಹಾಕಿದ ನಂತರ ನಮ್ಮ ಮನೆಗೆ ಕರೆದುಕೊಂಡು ಬಂದಿದ್ದೇವೆ ಎಂದರೆ ಸರಿಯಲ್ಲ. ದಿನಾಂಕ 04.05.2024 ರಂದು ವಿನಾಯಕಸ್ವಾಮಿ ನಾನು ಸೈಟು ತೆಗೆದುಕೊಳ್ಳಬೇಕು 50 ಲಕ್ಷ ಹಣ ತೆಗೆದುಕೊಂಡು ಬಾ ಎಂದು ನನ್ನ ಮಗಳಿಗೆ ಪೀಡಿಸುತ್ತಿದ್ದರು ಎಂದರೆ ಸರಿಯಲ್ಲ.

4. ಹಣವಿಲ್ಲವೆಂದು ಹೇಳಿದಾಗ ನನ್ನ ಮಗಳಿಗೆ ಹಲ್ಲಿನಿಂದ ಕಚ್ಚಿ ಬಾಟೆಲ್ ನಿಂದ ಹೊಡೆದು , ಎದೆಯ ಮೇಲೆ ಕಾಲಿಟ್ಟು ಅವಾಚ್ಯ ಶಬ್ದಗಳಿಂದ ಬೈದಿದ್ದಾರೆ ಎಂದರೆ ಸರಿಯಲ್ಲ. ಆಗ ನನ್ನ ಮಗಳ ಕಿರುಚಾಟ ಕೇಳಿ ನನ್ನ ಮಗ ಜಗಳ ಬಿಡಿಸಲು ಬಂದಾಗ ಆತನಿಗೂ ಸಹ ಹಲ್ಲಿನಿಂದ ಕಚ್ಚಿ ಚೆನ್ನಾಗಿ ಹೊಡೆದಿದ್ದಾರೆ ಎಂದರೆ ಸರಿಯಲ್ಲ. ನಂತರ ನನ್ನ ಮಗಳನ್ನು ಆಸ್ಪತ್ರೆಗೆ ದಾಖಲಿಸಿದ್ದೆವು ಎಂದರೆ ಸರಿಯಲ್ಲ. ಈ ರೀತಿ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಹೇಳಿಕೆಯನ್ನು ನಿಪಿ-13 ಎಂದು ಗುರುತಿಸಲಾಯಿತು. ಈಗ ನನ್ನ ಮಗಳು ಮತ್ತು ಆರೋಪಿಗಳು ರಾಜಿಯಾಗಿದ್ದಾರೆ ಎಂದರೆ ಸರಿ. ಆದಕಾರಣ ನಾನು ಈಗ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ</u> ಆರೋಪಿಗಳ ಪರ ವಕೀಲರು ಇಲ್ಲವೆಂದಿದ್ದಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

2 ನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ತುಮಕೂರು